ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ ನಾಯಕ್ ಮತ್ತು ನಾಯಕ ಈ ಜನಾಂಗದವರು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ಇದ್ದಾರೆ. ಆದರೆ ಅವರಲ್ಲಿ ನಾಯಕ, ನಾಯಕ್ಸ್, ಬೇಡ, ಪರಿವಾರ, ತಳವಾರ ಎಂಬ ಸಿನಾನಿಮ್ಸ್. ಕ್ಲಾರಿಫಿಕೇಷನ್‌ಗಾಗಿ ಭಾರತ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೆವು, ಭಾರತ ಸರ್ಕಾರದ ಒಪ್ಪಿಗೆಯ ನಿರೀಕ್ಷಣೆಯ ಮೇರೆಗೆ ಶೈಕ್ಷಣಿಕ ಸಂಸ್ಥೆಗಳಲ್ಲಿ ಶೈಕ್ಷಣಿಕ ರಿಯಾಯಿತಿಯನ್ನು ಕೊಡಲು ಸರ್ಕಾರ ಈಗಾಗಲೇ ಸರ್ಕುಲೇಷನ್ ಕೊಟ್ಟು ಈ ಸೌಲಭ್ಯಗಳು ಸಿಗುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ.

(೧೮) ರಾಜ್ಯದಲ್ಲಿ ಹೋಬಳಿ ಮಟ್ಟದಲ್ಲಿ ಬಡವರ್ಕಳಿಗೆ ವಸತಿ ಶಾಲೆಗಳನ್ನು ತೆರೆಯುವುದು

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಹಳ್ಳಿಗಾಡುಗಳಲ್ಲಿ ತಾಂಡವಾಡುತ್ತಿರುವ ದಾರಿದ್ರ್ಯ ಹಸಿವಿನಿಂದಾಗಿ ಶೇಕಡ ೯೫ರಷ್ಟು ಮಕ್ಕಳು ಶಾಲೆಯನ್ನೇ ಕಾಣುತ್ತಿಲ್ಲ. ಸರ್ಕಾರ ೫೫ ವರ್ಷ ತುಂಬಿದ ಮಕ್ಕಳಿಗಾಗಿ ಇಡೀ ಕರ್ನಾಟಕದಲ್ಲಿ ೧೨೫ ವಸತಿ ಶಾಲೆಗಳನ್ನು ನಡೆಸುತ್ತಿದೆ. ಇವುಗಳಲ್ಲಿ ಸುಮಾರು ೪,೦೦೦ ವಿದ್ಯಾರ್ಥಿಗಳಿದ್ದಾರೆ. ೭೬೫ ಮಹಿಳಾ ಕೇಂದ್ರಗಳಿದ್ದು ಇದರಲ್ಲಿ ಸುಮಾರು ೪೦,೦೦೦ ಮಕ್ಕಳಿಗೆ ಮಾತ್ರ ವಿದ್ಯೆಯ ವ್ಯವಸ್ಥೆಯಿದೆ. ಆದ್ದರಿಂದ ಹಳ್ಳಿಗಾಡಿನ ಬಡ ಮಕ್ಕಳಿಗೆ ಸಮ್ಮವಸ್ಥಿತವಾದ ಶಿಕ್ಷಣವು ದೊರಕಬೇಕಾದರೆ ಪ್ರತಿ ಹೋಬಳಿಗೊಂದು ಕನಿಷ್ಟ ೧೦೦ ಮಕ್ಕಳಿಗೆ ಪಾಥಮಿಕ ಶಿಕ್ಷಣ ನೀಡುವ ವಸತಿ ಶಾಲೆಯನ್ನು ಸರ್ಕಾರ ತೆಗೆಯಬೇಕು. ಇದರ ಬಗ್ಗೆ ಸರ್ಕಾರವು ಸಮಗ್ರವಾದ ಗ್ರಾಮೀಣ ಶಿಕ್ಷಣ ಯೋಜನೆಯೊಂದನ್ನು ರೂಪಿಸುವುದು ಅತ್ಯಗತ್ಯ ಎಂದು ಸರ್ಕಾರವನ್ನು ಒತ್ತಾಯಿಸಿ ಇದರ ಬಗ್ಗೆ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಇಂಥ ಶಾಲೆಗಳನ್ನು ತೆರೆಯಲು ಪರಿಶೀಲನೆ ಮಾಡುತ್ತೇನೆ. ಆದರೆ ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಒಂದೊಂದು ವಸತಿ ಶಾಲೆಯನ್ನು ಮಾಡಬೇಕೆಂದು ಇದ್ದೇವೆ. ಹೋಬಳಿ ಮಟ್ಟದಲ್ಲಿ ಮಾಡಬೇಕೆಂದರೆ ಕಷ್ಟವಾಗುತ್ತದೆ. ಆದರೂ ಈ ವಿಚಾರವನ್ನು ಪರಿಶೀಲನೆ ಮಾಡುತ್ತೇನೆಂಬುದಾಗಿ ಹೇಳುತ್ತೇನೆ.

(೧೯) ಬಂಟ್ವಾಳ ತಾಲ್ಲೂಕಿನಲ್ಲಿ ನದಿಗಳ ಪ್ರವಾಹದಿಂದ ಹಾನಿಯುಂಟಾಗಿರುವುದು

ಶ್ರೀ ಬಿ.ಎ. ಉಮರಬ್ಬ (ವಿಟ್ಲ).—ಆಗಸ್ಟ್ ೨ನೇ ವಾರದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಭಾರಿ ಮಳೆ ಬಂತು. ಇದರ ಪರಿಣಾಮವಾಗಿ ಜಿಲ್ಲೆಯ ನದಿಗಳೆಲ್ಲಾ ಪ್ರವಾಹ ಭರಿತವಾದವು. ಈ ಮಳೆ ಮತ್ತು ಪ್ರವಾಹದ ಪರಿಣಾಮವಾಗಿ ಅನೇಕ ಕಡೆ ರಸ್ತೆಗಳು ನದಿ ದಂಡೆಗಳು, ಅಪಾರ ಹಾನಿಗೆ ತುತ್ತಾದವು.

ಈ ಹಾನಿ ಹೆಚ್ಚಿನ ಪ್ರಮಾಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಸಂಭವಿಸಿದೆ. ತಕ್ಷಣ ಸ್ಥಳಕ್ಕೆ ಧಾವಿಸಿ ಬಂದ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಪರಿಸ್ಥಿತಿಯ ಗಂಭೀರತೆಯ ಬಗ್ಗೆ ಈಗಾಗಲೇ ಸರಕಾರದ ಗಮನ ಸೆಳೆದಿರಬಹುದೆಂದು ಭಾವಿಸಿದ್ದೇನೆ. ಅನೇಕ ರಸ್ತೆಗಳು ಹಾನಿಗೆ ತುತ್ತಾಗಿದೆ. ಉದಾಹರಣೆಗೆ:

೧) ಮಾಣಿ ಉಳ್ಳಾಲ ರಸ್ತೆ. ೨) ಶಂಬೂರು–ಬಾಳ್ತಿಲ ರಸ್ತೆ, ೩) ಬ್ರಂಹಾವರ ಕೊಟ್ಟಾ ಜಾಗದ ಗಡ್ಡೆ ರಸ್ತೆ,

ಇತ್ಯಾದಿಗಳು ಅಂತೆಯೇ ಕೆಲವಾರು ಕಡೆ ನೇತ್ರಾವತಿ ನದಿಯ ದಂಡೆಗಳು ಸಹಾ ಕುಸಿತಕ್ಕೆ ಒಳಗಾಗಿವೆ.

ಬಂಟ್ವಾಳ ಪುರಸಭೆಯ ವ್ಯಾಪ್ತಿಯಲ್ಲಿಯೂ ಸಹ ಈ ಮಳೆ ಮತ್ತು ಪ್ರವಾಹ ಅಪಾರ ಹಾನಿಯನ್ನುಂಟು ಮಾಡಿದೆ. ಈ ಹಾನಿಗಳ ತುರ್ತು ದುರಸ್ತಿ ತುಂಬಾ ಅವಶ್ಯಕ ಎಂಬುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಸಚಿವರು).—ಸನ್ಮಾನ್ಯ ಸದಸ್ಯರಾದ ಉಮರಬ್ಬನವರು ಪ್ರಸ್ತಾಪಿಸಿರುವ ಹಾನಿಯ ಬಗ್ಗೆ ಅಗತ್ಯ ದುರಸ್ತಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.